ಪಾಠ 6

# ಹೊಸ

# ಅಳತೆಯ ಮಟ್ಟಗಳು



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ಅಳತೆಯ ಮಟ್ಟಗಳನ್ನು ಯಾರು ನಿಶ್ಚಯಿಸುತ್ತಾರೆ?

ಅಳತೆಯ ಮಟ್ಟಗಳನ್ನು ಮತ್ತೆಲ್ಲಿ ಕಾಣುವಿರಿ?

ನೀವು ಅಳತೆಯ ಮಟ್ಟಗಳನ್ನು ಹೇಗೆ ಪೂರೈಸುತ್ತೀರಿ?

ಜಯಕ್ಕಾಗಿ ಅಳತೆಯ ಮಟ್ಟಗಳು

## ಅಳತೆಯ ಮಟ್ಟಗಳನ್ನು ಯಾರು ನಿಶ್ಚಯಿಸುತ್ತಾರೆ?

ಮನೆಯಲ್ಲಿ ತಂದೆ-ತಾಯಿಗಳು ಅಳತೆಯಮಟ್ಟಗಳನ್ನು ನಿಶ್ಚಯಿಸುತ್ತಾರೆ. ಮಕ್ಕಳು ಯಾವ ರೀತಿಯಲ್ಲಿ ವರ್ತಿಸಬೇಕೆಂದು ಅವರು ತಿಳಿಸುತ್ತಾರೆ. ತಂದೆಯು ತನ್ನ ಮಕ್ಕಳು ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದೆಂದು ಹೇಳುತ್ತಾನೆ.

ಮಕ್ಕಳು ಬೇಗನೆ ಈ ಮಟ್ಟಕ್ಕನುಸಾರವಾಗಿ ಜೀವಿಸುವುದನ್ನು ಕಲಿಯುತ್ತಾರೆ. ಅವರು ಈ ಕಟ್ಟಳೆಗಳನ್ನು ಮೀರಿದಾಗ ತಂದೆಯು ಅವರನ್ನು ಸರಿಪಡಿಸುತ್ತಾನೆ. ಒಂದು ವೇಳೆ ಅವರು ವಿಧೇಯರಾಗಲು ಮೊಂಡುತನದಿಂದ ನಿರಾಕರಿಸಿದರೆ ಆತನು ಅವರನ್ನು ಶಿಕ್ಷಿಸುತ್ತಾನೆ. ಅವರು ಈಗಲೂ ಕುಟುಂಬದ ಸದಸ್ಯರು ಅಂದರೆ ಅವರ ಅವಿಧೇಯತೆಯು ಸಮಸ್ಯೆಗಳನ್ನು ಮತ್ತು ಶ್ರಮಗಳನ್ನು ತರುತ್ತದೆ.

ನಮ್ಮ ಸ್ವರ್ಗದ ತಂದೆಯು ತನ್ನ ಮಕ್ಕಳು ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದೆಂಬುದರ ಕುರಿತು ಮಟ್ಟವನ್ನು ನಿಶ್ಚಯಿಸಿದ್ದಾನೆ. ಕೆಲವು ಸಾರಿ ಆತನು ಸಹ ತನ್ನ ಮಕ್ಕಳು ಒಳ್ಳೆಯವರು ಮತ್ತು ವಿಧೇಯರು ಆಗುವಂತೆ ಶಿಕ್ಷಿಸುತ್ತಾನೆ.

## ನೀವು ಮಾಡಬೇಕಾದದ್ದು

1. ಮನೆಯಲ್ಲಿ ಅಳತೆ-ಮಟ್ಟಗಳನ್ನು ಯಾರು ನಿಶ್ಚಯಿಸುತ್ತಾರೆ?
   ...ಅ) . ಮಕ್ಕಳು
   ...ಆ) ನೆರೆಹೊರೆಯವರು
   ...ಇ) ತಂದೆ-ತಾಯಿಗಳು
2. ಶಿಷ್ಯರು ಯಾವ ರೀತಿಯಲ್ಲಿ ವರ್ತಿಸಬೇಕೆಂಬುದನ್ನು ಹೇಳುವುದಕ್ಕೆ ಯಾರಿಗೆ ಅಧಿಕಾರ ಉಂಟು?
   ...ಅ) ನಮ್ಮ ಸ್ವರ್ಗದ ತಂದೆಗೆ
   ...ಆ) ನಾವು ಜೀವಿಸುತ್ತಿರುವ ಸಂಸ್ಕೃತಿಯಲ್ಲಿ
   ...ಇ) ನಾವು ನಾವಾಗಿಯೇ

ಉತ್ತರಗಳು : 1ಇ) ತಂದೆ-ತಾಯಿಗಳು 2ಅ) ನಮ್ಮ ಸ್ವರ್ಗದ ತಂದೆಗೆ

## ಅಳತೆಯಮಟ್ಟಗಳನ್ನು ಮತ್ತೆಲ್ಲಿ ಕಾಣುವಿರಿ?

ದೇವರು ಸತ್ಯವೇದದಲ್ಲಿ ಜೀವಿತಕ್ಕಿರುವ ಅಳತೆಯ ಮಟ್ಟಗಳನ್ನು ನಿಶ್ಚಯಿಸಿದ್ದಾನೆ. ನೀವು ಇದನ್ನು ಸತ್ಯವೇದಲ್ಲೆಲ್ಲಾ ಮತ್ತು ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ ಕಾಣುವಿರಿ.

ಆದುದರಿಂದ ದೇವರು ತನ್ನ ಮಕ್ಕಳು ಹೇಗೆ ಜೀವಿಸಬೇಕೆಂಬುದರ ಕುರಿತು ಯಾವ ಸಂದೇಹಗಳಿರಬಾರದೆಂದು ನಮಗೆ ಕಲಿಸಲು ಮತ್ತು ಮಾರ್ಗ ತೋರಿಸಲು ಯೇಸುವನ್ನು ಕಳುಹಿಸಿದನು. ಆತನು ನೀವು ಪರಿಪೂರ್ಣ ಜೀವನ ಜೀವಿಸುವುದಕ್ಕೆ ಮಾದರಿಯೂ ಆಗಿದ್ದಾನೆ.

ಯೇಸು ಜೀವಿಸುವುದರ ಮಟ್ಟದ ಕುರಿತು 'ಪರ್ವತ ಪ್ರಸಂಗದಲ್ಲಿ' ವಿವರಿಸಿದ್ದಾನೆ. ನೀವು ಇದನ್ನು ಮತ್ತಾಯ 5,6, ಮತ್ತು 7ರಲ್ಲಿ ಕಾಣುವಿರಿ.

## ನೀವು ಮಾಡಬೇಕಾದದ್ದು

3. ಒಳ್ಳೆಯ ಜೀವಿತಕ್ಕೆ ಒಂದು ಪರಿಪೂರ್ಣ ಮಾದರಿಯನ್ನು ನಿಮಗೆ ಯಾರು ಕೊಟ್ಟಿದ್ದಾರೆ?

...ಅ) ಬೋಧಕನು

...ಆ) ಯೇಸುಕ್ರಿಸ್ತನು

...ಇ) ಇತರ ಕ್ರೈಸ್ತರು

4. 'ಪರ್ವತ ಪ್ರಸಂಗ'ವನ್ನು ಕಾಣುವ ಅಧ್ಯಾಯಗಳು

...ಅ) ಮತ್ತಾಯ 5,6 ಮತ್ತು 7

...ಆ) ಮಾರ್ಕ 5,6 ಮತ್ತು 7

...ಇ) ಯೋಹಾನ 5,6 ಮತ್ತು 7

5. 'ಪರ್ವತ ಪ್ರಸಂಗ'ದಲ್ಲಿ ಯೇಸು

...ಅ) ಹೇಳಿದ್ದು ನಂಬಿಕೆಯಿಂದ ಪರ್ವತಗಳನ್ನು ಎತ್ತಬಹುದೆಂದು

...ಆ) ಯೆರೂಸಲೇಮಿನ ಸುತ್ತಲೂ ಇದ್ದ ಗೋಡೆಯ ಕುರಿತು ಹೇಳಿದ್ದು

...ಇ) ಜೀವಿತದ ಮಟ್ಟದ ಕುರಿತು ಹೇಳಿದ್ದು

ಉತ್ತರಗಳು 3ಆ) ಯೇಸು ಕ್ರಿಸ್ತನು 4ಅ) ಮತ್ತಾಯ 5,6 ಮತ್ತು 7 5ಇ) ಜೀವಿತದ ಮಟ್ಟದ ಕುರಿತು ಹೇಳಿದ್ದು

ಮೊದಲನೆಯದಾಗಿ ಯೇಸು ಹೇಳಿದ್ದು, ದೇವರು ವಿಶೇಷವಾದ ಆಶೀರ್ವಾದಗಳನ್ನು ಯಾರು ದೀನರು, ಶಾಂತಪ್ರಿಯರು, ಶುದ್ಧಹೃದಯರು, ತಮ್ಮ ಜೀವಿತದಲ್ಲಿ ದೇವರಿಗೆ ಪ್ರಥಮ ಸ್ಥಾನ ಕೊಡುವರು ಮತ್ತು ಆತನ ನಿಮಿತ್ತವಾಗಿ ಹಿಂಸೆ ಅನುಭವಿಸಲು ಯಾರು ಸಿದ್ಧರಾಗಿದ್ದಾರೋ ಅವರಿಗೆ ಕೊಡುತ್ತಾನೆ.

ಯೇಸು ಹೇಳಿದ್ದು, ನಾವು ವೈರಿಗಳನ್ನು ಪ್ರೀತಿಸಬೇಕು ಮತ್ತು ಅವರಿಗಾಗಿ ಪ್ರಾರ್ಥಿಸಬೇಕು, ಯಾರಿಗೆ ಮನನೋಯಿಸಿದ್ದೇವೋ ಅವರಿಂದ ಕ್ಷಮೆ ಕೇಳಬೇಕು

ಮತ್ತು ನಮ್ಮೊಂದಿಗೆ ತಪ್ಪಾಗಿ ವರ್ತಿಸುವವರಿಗೆ ಒಳ್ಳೆಯದನ್ನು ಮಾಡಬೇಕು. ಇತರರೊಂದಿಗೆ ನಡೆದುಕೊಳ್ಳಬೇಕಾದುದರ ಕುರಿತು ಆತನು ಕೊಟ್ಟ ಆಜ್ಞೆಗಳು, ಬೇರೆಯವರು ಕೊಟ್ಟವುಗಳಿಗಿಂತ ಅತ್ಯುತ್ತಮವಾಗಿವೆ.

## ನೀವು ಮಾಡಬೇಕಾದದ್ದು

6. ಮತ್ತಾಯ, 5ನೇ ಅಧ್ಯಾಯ ಓದಿರಿ
7. (ಎರಡನ್ನು ಬರೆಯಿರಿ) ಮಾದರಿಯ ಜೀವಿತದಲ್ಲಿರಬೇಕಾದ ಒಂದು ವಿಷಯ ಕುರಿತು ಯೇಸು ನಿಮಗೆ ಬೋಧಿಸುವುದು.
   ...ಅ) ದೀನರಾಗಿರಬೇಕೆಂದು
   ...ಆ) ದೇವರನ್ನು ಪ್ರಥಮ ಸ್ಥಾನದಲ್ಲಿಟ್ಟು ಆತನು ಬಯಸಿದ್ದನ್ನು ಮಾಡುವುದು
   ...ಇ) ನಮ್ಮೊಂದಿಗೆ ತಪ್ಪಾಗಿ ವರ್ತಿಸಿದವರೊಂದಿಗೆ ಪ್ರತೀಕಾರ ತೀರಿಸುವುದು.
   ...ಈ) ಎಲ್ಲಾ ವಿಷಯಗಳಲ್ಲಿ ನಿಮ್ಮನ್ನೇ ಮೆಚ್ಚಿಸಿಕೊಳ್ಳುವುದು
8. (ಎರಡನ್ನು ಬರೆಯಿರಿ) ಮತ್ತಾಯ 5:13,15ರಲ್ಲಿ ಯೇಸು ದೇವರ ಮಕ್ಕಳು ಹೀಗೆ ಇರುತ್ತಾರೆಂದು ಹೇಳಿದ.
   ...ಅ) ಮಾನವ ಕುಲಕ್ಕೆ ಉಪ್ಪಾಗಿರುವಂತೆ
   ...ಆ) ಎಂದಿಗೂ ತಪ್ಪಾಗಿ ತಿಳಿದುಕೊಳ್ಳದಂತೆ
   ...ಇ) ಇಡೀ ಲೋಕಕ್ಕೆ ದೀಪದ ಹಾಗೆ
   ...ಈ) ಸುಂದರವಾದ ಪುಷ್ಪಗಳಂತೆ
9. (ಎರಡನ್ನು ಬರೆಯಿರಿ) ಮತ್ತಾಯ 5:21-30 ಯೇಸು ಇದರ ಕುರಿತು ಎಚ್ಚರಿಸಿದ
   ...ಅ) ಜೂಜಾಟ
   ...ಆ) ಕೋಪ ಮತ್ತು ಪ್ರತೀಕಾರ
   ...ಇ) ಅಸಹ್ಯ ಯೋಚನೆಗಳು ಮತ್ತು ವ್ಯಭಿಚಾರ
   ...ಈ) ದಶಮಾಂಶ ಕೊಡುವುದರ ಕುರಿತು

10. ಮತ್ತಾಯ 5:43-48ರಲ್ಲಿ ಯೇಸು ನಮಗೆ ಆಜ್ಞಾಪಿಸಿದ್ದು

...ಅ) ನಮ್ಮನ್ನು ಪ್ರೀತಿಸುವವರನ್ನು ಮಾತ್ರ ಪ್ರೀತಿಸಬೇಕು

...ಆ) ನಮ್ಮ ವೈರಿಗಳನ್ನು ಪ್ರೀತಿಸಬೇಕು.

**ಉತ್ತರಗಳು** : 7ಅ) ದೀನರಾಗಿರಬೇಕೆಂದು ಆ) ದೇವರನ್ನು ಪ್ರಥಮ ಸ್ಥಾನದಲ್ಲಿಟ್ಟು ಆತನ ಬಯಸಿದ್ದನ್ನು ಮಾಡುವುದು 8) ಮಾನವ ಕುಲಕ್ಕೆ ಉಪ್ಪಾಗಿರುವಂತೆ, ಇ) ಇಡೀ ಲೋಕಕ್ಕೆ ದೀಪದ ಹಾಗೆ 9ಅ) ಕೋಪ ಮತ್ತು ಪ್ರತೀಕಾರ ಇ) ಅಸಹ್ಯ ಯೋಚನೆಗಳು ಮತ್ತು ವ್ಯಭಿಚಾರ, 10ಆ) ನಮ್ಮ ವೈರಿಗಳನ್ನು ಪ್ರೀತಿಸಬೇಕು.

ಯೇಸುವು ಇತರರನ್ನು ಹೇಗೆ ನಡೆಸಿಕೊಳ್ಳಬೇಕೆಂದು ನಮಗೆ ಪ್ರಾಥಮಿಕ ತತ್ವಗಳನ್ನು ಕೊಟ್ಟನು. ನಾವು ಇದನ್ನು ಬಂಗಾರದ ಕಟ್ಟಳೆ ಎನ್ನುತತ್ತೆ. ಮತ್ತಾಯ 7:12 ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ, ಅದನ್ನೆ ನೀವು ಅವರಿಗೆ ಮಾಡಿರಿ.

ನಾವು ಗರ್ವಿಷ್ಟರು, ಸ್ವಾರ್ಥಿಗಳು, ಜಗಳಗಂಟಿಗರು ಮತ್ತು ತಪ್ಪು ಹುಡುಕುವವರು ಆಗಿರಬಾರದು. ನಾವು ಮನಸ್ಸಿನಲ್ಲಿಯೂ ಕೆಟ್ಟ ಯೋಚನೆಗಳಿಗೆ ಅನುಕಂಪ ತೋರಬಾರದು.

ನಮ್ಮ ಪ್ರಥಮ ಆಸಕ್ತಿಯು ದೇವರನ್ನು ಮೆಚ್ಚಿಸುವುದು ಮತ್ತು ಆತನು ಇಚ್ಚಿಸುವುದನ್ನು ಮಾಡುವುದು. ನಾವು ಲೌಕಿಕ ಐಶ್ವರ್ಯಗಳನ್ನು ನಮ್ಮ ಗುರಿಯಾಗಿಟ್ಟುಕೊಂಡು ದೇವರ ಸೇವೆಯನ್ನು ಅದೇ ಸಮಯದಲ್ಲಿ ಮಾಡಲು ಆಗದು. ಆದರೆ ನಾವು ಆತನನ್ನು ಪ್ರಥಮ ಸ್ಥಾನದಲ್ಲಿಟ್ಟರೆ ಆತನೇ ನಮ್ಮೆಲ್ಲಾ ಅಗತ್ಯತೆಗಳನ್ನು ಪೂರೈಸುತ್ತಾನೆ. ಅದು ಅಲ್ಲದೆ, ನಾವು ಆತನಿಗಾಗಿ ಏನೇ ಮಾಡಿದರೂ ಅದಕ್ಕೆ ಸ್ವರ್ಗಲೋಕದಲ್ಲಿ ನಿತ್ಯಐಶ್ವರ್ಯದಿಂದ ಬಹುಮಾನ ಸಿಗುವುದು.

## ನೀವು ಮಾಡಬೇಕಾದದ್ದು

11. ಮತ್ತಾಯ 6ನೇ ಅಧ್ಯಾಯ ಓದಿರಿ

12. ಪ್ರಾಥಮಿಕ ತತ್ವವಾಗಿರುವ "ಬಂಗಾರದ ಕಟ್ಟಳೆಯ"ಲ್ಲಿರುವುದು

...ಅ) ಬಂಗಾರವನ್ನು ಉಪಯೋಗವಾಗುವ ವಸ್ತುಗಳಿಗಾಗಿ ಉಪಯೋಗಿಸಿರಿ

...ಆ) ಇತರರು ನಿಮ್ಮನ್ನು ನಡೆಸಿಕೊಡುವಂತೆ ನೀವು ಅವರನ್ನು ನಡೆಸಿಕೊಳ್ಳಿರಿ

...ಇ) ಇತರರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ನೀವು ಅಪೇಕ್ಷಿಸುತ್ತೀರೋ ಹಾಗೆಯೇ ನೀವೂ ಅವರಿಗೆ ಮಾಡಿರಿ.

13. ಮತ್ತಾಯ 6:19-21ರಲ್ಲಿ ಯೇಸು ಐಶ್ವರ್ಯವನ್ನು ಉಳಿಸಬೇಕೆಂದು ಹೇಳಿದ್ದು

...ಅ) ಸ್ವರ್ಗದಲ್ಲಿ

...ಆ) ಭೂಲೋಕದಲ್ಲಿ

**ಉತ್ತರಗಳು:** 12ಇ) ಇತರರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ನೀವು ಅಪೇಕ್ಷಿಸುತ್ತೀರೋ ಹಾಗೆಯೇ ನೀವೂ ಅವರಿಗೆ ಮಾಡಿರಿ 13ಅ) ಸ್ವರ್ಗದಲ್ಲಿ

## ನೀವು ಅಳತೆಯಮಟ್ಟಗಳನ್ನು ಹೇಗೆ ಪೂರೈಸುತ್ತೀರಿ

ಯಾರೂ ಸಹ ದೇವರ ಸಹಾಯವಿಲ್ಲದೆ ಈ ಕಟ್ಟಳೆಗಳನ್ನು ಅನುಸರಿಸುವುದು ಅಸಾಧ್ಯವೆಂದು ಯೇಸು ತಿಳಿದಿದ್ದನು. ಆದುದರಿಂದ ಆತನು ತನ್ನ ಶಿಷ್ಯರಿಗೆ ಸ್ವರ್ಗದ ತಂದೆಯನ್ನು ಪ್ರಾರ್ಥಿಸುವಂತೆ ಮತ್ತು ಆತನಿಂದ ಸಹಾಯ ಕೇಳಿರಿ ಎಂದು ಬೋಧಿಸಿದನು. ಇದರ ಕುರಿತು ನೀವು ಮುಂದಿನ ಅಧ್ಯಾಯದಲ್ಲಿ ಹೆಚ್ಚು ಕಲಿಯುವಿರಿ. ದೇವರು ನಿರೀಕ್ಷಿಸುವ ಮಟ್ಟಕ್ಕೆ ಜೀವಿಸುತ್ತಿಲ್ಲವೆಂದು ನೀವು ಚಿಂತೆ ಮಾಡದರಿ. ಆತನು ನಿಮಗೆ ಪ್ರತಿಹೆಜ್ಜೆಗೆ ಸಹಾಯ ಮಾಡುವನು.

## ನೀವು ಮಾಡಬೇಕಾದದ್ದು

14. ಕ್ರಿಸ್ತನು ಈ ಪ್ರಸಂಗದಲ್ಲಿ ಒಂದು ಮಾದರಿಯ ಪ್ರಾರ್ಥನೆಯನ್ನು ಕೊಟ್ಟನು ಅದು ನಮಗೆ ಬೋಧಿಸುವುದೇನೆಂದರೆ

...ಅ) ಸಂತರಿಗೆ ಪ್ರಾರ್ಥಿಸಿರಿ

...ಆ) ನಮ್ಮ ಪೂರ್ವಕರಿಗೆ ಪ್ರಾರ್ಥಿಸಿರಿ

...ಇ) ದೇವರಿಗೆ ನೇರವಾಗಿ ಪ್ರಾರ್ಥಿಸಿರಿ

15. ಕರ್ತನು ಹೇಳಿಕೊಟ್ಟ ಪ್ರಾರ್ಥನೆ ಇದು ಆಗಿರುತ್ತದೆ

...ಅ) ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಪ್ರಾರ್ಥನೆಯಾಗಿದೆ

...ಆ) 'ಪರ್ವತ ಪ್ರಸಂಗದಲ್ಲಿ' ಸಿಕ್ಕುವ ಒಂದು ಮಾದರಿಯ ಪ್ರಾರ್ಥನೆಯಾಗಿದೆ.

...ಇ) ಕ್ರಿಸ್ತನು ಗೆತ್ಸೇಮನೆಯಲ್ಲಿ ಮಾಡಿದ ಪ್ರಾರ್ಥನೆಯು

16. ಮತ್ತಾಯ 7ನೇ ಅಧ್ಯಾಯ ಓದಿರಿ

**ಉತ್ತರಗಳು:** 14ಇ) ದೇವರಿಗೆ ನೇರವಾಗಿ ಪ್ರಾರ್ಥಿಸಿರಿ 15ಆ) 'ಪರ್ವತ ಪ್ರಸಂಗ'ದಲ್ಲಿ ಸಿಕ್ಕುವ ಒಂದು ಮಾದರಿಯ ಪ್ರಾರ್ಥನೆಯಾಗಿದೆ.

## ಜಯಕ್ಕಾಗಿ ಅಳತೆಯ ಮಟ್ಟಗಳು

ಯೇಸು ತನ್ನ ಆಜ್ಞೆಗಳು ಒಂದು ಜಯಭರಿತ ಜೀವಿತಕ್ಕೆ ಮಾದರಿಯಾಗಿವೆ ಎಂದು ತಿಳಿಯ ಹೇಳಿದ. ನಮ್ಮ ಜೀವಿತವು ಒಂದು ಭವನದ ಹಾಗೆ. ನಮ್ಮ ಯೋಚನೆ, ಮಾತುಗಳು ಮತ್ತು ಕೃತ್ಯಗಳು ಈ ಭವನದ ಇಟ್ಟಿಗೆಗಳಾಗಿ ನಾವು ಆತನ ಬೋಧನೆಯ ಅಸ್ತಿವಾರದ ಮೇಲೆ ಇವುಗಳನ್ನು ಒಂದೊಂದಾಗಿ ಜೋಡಿಸಿದರೆ ನಮ್ಮ ನಡತೆಯು ಜೀವಿತದ ಪರಿಕ್ಷಾಕಾಲ ಮತ್ತು ಬಿರುಗಾಳಿಯನ್ನು ಎದುರಿಸಿ ನಿಲ್ಲುತ್ತದೆ.

ಯಾವನಾದರೂ ಯೇಸು ಕೊಟ್ಟ ಅಳತೆಯ ಮಟ್ಟಗಳಿಗನುಗುಣವಾಗಿ ಇರದೆ ತನ್ನ ಇಷ್ಟಾನುಸಾರವಾಗಿ ಜೀವಿಸಿದರೆ ಅವನು ಅಸ್ತಿವಾರವಿಲ್ಲದ ಮರಳಿನ ಮೇಲೆ ಮನೆಯನ್ನು ಕಟ್ಟಿದವನ ಹಾಗೆ ಸೋತು ಹೋಗಿರುವನು. ಆತನು ಬಿರುಗಾಳಿ ಬಂದಾಗ ಅದನ್ನು ಎದುರಿಸಿ ನಿಲ್ಲಲಾರನು.

ನಿಮಗೆ ಒಂದು ವೇಳೆ ಜಯಭರಿತ ಶಿಷ್ಯರಾಗಬೇಕಿದ್ದರೆ, ನಿಮ್ಮ ಜೀವಿತವನ್ನು ಕ್ರಿಸ್ತನ ಬೋಧನೆಯ ಮೇಲೆ ಕಟ್ಟಿರಿ ಮತ್ತು ಆತನ ಮಟ್ಟವನ್ನು ಅನುಸರಿಸಿರಿ. ಪವಿತ್ರಾತ್ಮನು ನಿಮಗೆ ಸಹಾಯ ಮಾಡುವನು.

### ನೀವು ಮಾಡಬೇಕಾದದ್ದು

17. ಒಬ್ಬ ವ್ಯಕ್ತಿಯು ಕ್ರಿಸ್ತನ ಬೋಧನೆಗಳಿಗೆ ವಿಧೇಯನಾದರೆ ಮತ್ತು ತನ್ನ ಹೊಸ ಜೀವಿತಕ್ಕೆ ಅವುಗಳನ್ನು ಆಧಾರ ಮಾಡಿಕೊಂಡರೆ ಅವನು ಜೀವಿತವು ಹೇಗೆ ಇರುವುದೆಂದರೆ

...ಅ) ಒಬ್ಬನು ಬಂಡೆಯು ಮೇಲೆ ಮನೆಕಟ್ಟಿದ ಹಾಗೆ ಇರುವುದು

...ಆ) ಒಬ್ಬನು ಮರಳಿನ ಮೇಲೆ ಮನೆಕಟ್ಟಿದ ಹಾಗೆ ಇರುವುದು

**ಉತ್ತರ** : 17ಅ) ಒಬ್ಬನು ಬಂಡೆಯ ಮೇಲೆ ಮನೆ ಕಟ್ಟಿದ ಹಾಗೆ ಇರುವುದು.